**2 ನೇ ಅಪರ ಜಿಲ್ಲಾ ಮತ್ತು ಸತ್ತ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು**

**S.C. No. 241/2023**

**ಸಾಕ್ಷಿಯನ್ನು ದಿನಾಂಕ 28.11.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ನಾಗಭೂಷಣರಾಧ್ಯ | ಪಿ.ಡಬ್ಲ್ಯೂ-4 |
| ತಂದೆಯ/ಗಂಡನ ಹೆಸರು | : | ಮಹದೇವರಾಧ್ಯ | ಸಿ.ಡಬ್ಲ್ಯೂ-13 |
| ವಯಸ್ಸು | : | 39 | |
| ಉದ್ಯೋಗ | : | ಫಾರ್ಮಸಿ ವ್ಯವಹಾರ | |
| ವಾಸ ಸ್ಥಳ | : | ವರುಣ | |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ**

ಚಾಸ 12 ನನ್ನ ಹೆಂಡತಿ ಇರುತ್ತಾರೆ. ಚಾಸ 14 ಮತ್ತು 15 ನನ್ನ ನಾದಿನಿ ಹಾಗೂ ಅವರ ಗಂಡ ಇರುತ್ತಾರೆ. ಚಾಸ 17 ರಿಂದ 19 ನನ್ನ ಹೆಂಡತಿಯ ಸೋದರ ಮಾವ ಇರುತ್ತಾರೆ. ಚಾಸ 20 ಇವರು ಚಾಸ 19 ರವರ ಮಗ. ಚಾಸ 1 ಮತ್ತು 7 ನನ್ನ ಮಾವ ಹಾಗೂ ಅತ್ತೆ ಇರುತ್ತಾರೆ. ಚಾಸ 11 ವೈಭವಆರಾಧ್ಯ ನನ್ನ ನಾದಿನಿ ಮೃತ ಪಲ್ಲವಿ ಇವರ ಮಗ ಇರುತ್ತಾನೆ. ನ್ಯಾಯಾಲಯದ ಮುಂದಿರುವ ಆರೋಪಿ ನನ್ನ ನಾದಿನಿ ಪಲ್ಲವಿಯ ಗಂಡ ಇರುತ್ತಾನೆ. 2014 ರಲ್ಲಿ ಆರೋಪಿತನ ಮದುವೆ ನನ್ನ ನಾದಿನಿ ಪಲ್ಲವಿಯ ಜೊತೆ ಆಗಿರುತ್ತದೆ. ಆರೋಪಿಯ ಸ್ವಂತ ಊರು ಬೆಂಗಳೂರಿನ ಬೇಗೂರು ಇರುತ್ತದೆ. ಆರೋಪಿ ಮದುವೆ ಕಾಲಕ್ಕೆ ಮೈಸೂರಿನ ನಜರಬಾದ್ ನಲ್ಲಿ

ವಾಸವಿದ್ದರು. ಮದುವೆ ಬಳಿಕ ಆರೋಪಿ ತನ್ನ ಹೆಂಡತಿ ಜೊತೆ ಮೈಸೂರು, ಭುಗತಹಳ್ಳಿ, ವರುಣ, ಮಹದೇವಪುರದಲ್ಲಿ ವಾಸವಿದ್ದರು. ಚಾಸ 11 ವೈಭವನಿಗೆ ಈಗ 11 ವರ್ಷ ವಯಸ್ಸು. ವೈಭವ್ ಜನಿಸಿದಾಗ ಆರೋಪಿಯು ವರುಣ ಗ್ರಾಮದ ನಮ್ಮ ಅತ್ತೆ ಮನೆಯಲ್ಲಿ ವಾಸವಿದ್ದ. ಮಗು ಜನಿಸಿದ 1 ವರ್ಷದ ಬಳಿಕ ಆರೋಪಿ ವರುಣದ ಬೇರೆ ಬಾಡಿಗೆ ಮನೆಯಲ್ಲಿ ವಾಸವಿದ್ದ. ನಂತರ ಆರೋಪಿಯು ವರುಣದಲ್ಲಿ ಸೈಟ್ ತೆಗೆದುಕೊಂಡು ಮನೆ ಕಟ್ಟಲು ಪ್ರಾರಂಭಿಸಿದ. ಆ ಕಾಲಕ್ಕೆ ಆರೋಪಿ ಸ್ವಲ್ಪ ಸಾಲ ಮಾಡಿಕೊಂಡು ಗಲಾಟೆಯಾಗಿದ್ದರಿಂದ ವರುಣದಿಂದ 3 ವರ್ಷಗಳವರೆಗೆ ಎಲ್ಲಿಯೋ ಹೋಗಿದ್ದ. ಆಗ ಆರೋಪಿತನ ಹೆಂಡತಿ ಪಲ್ಲವಿಯನ್ನು ನನ್ನ ಅತ್ತೆ ಮಾವ ನೋಡಿಕೊಳ್ಳುತ್ತಿದ್ದರು. ಆರೋಪಿ ಯಾವುದೋ ಬ್ಯಾಂಕ್ ಹಾಗೂ ಫೈನಾನ್ಸ ಕಂಪನಿಯಿಂದ 10-12 ಲಕ್ಷ ಸಾಲ ಮಾಡಿದ್ದ. ಆರೋಪಿ ಹೋದ ಬಳಿಕ ನನ್ನ ಅತ್ತೆ ಮಾವ ಮನೆಯನ್ನು ಪೂರ್ಣಗೊಳಿಸಿದರು. ಆ ಮನೆಯಲ್ಲಿ ಪಲ್ಲವಿ, ಆಕೆಯ ಮಗ ಹಾಗೂ ನನ್ನ ಅತ್ತೆಯ ತಂದೆ ತಾಯಿ ವಾಸವಿದ್ದರು. ಆರೋಪಿಯ ಸಾಲವನ್ನು ನನ್ನ ಅತ್ತೆ ಮಾವ ತೀರಿಸಿದ್ದರು. ನಂತರ ಕುಮಾರಆರಾಧ್ಯ ಇವರ ಮಗಳ ಮದುವೆ ಕಾಲಕ್ಕೆ ಆರೋಪಿ ವಾಪಸ್ ಬಂದಿದ್ದ ಹಾಗೂ ನನ್ನ ಅತ್ತೆಯ ತಮ್ಮಂದಿರ ಬಳಿ ನಾನು ಇನ್ನು ಮುಂದೆ ನನ್ನ ಹೆಂಡತಿಯನ್ನು ಸರಿಯಾಗಿ ನೋಡಿಕೊಳ್ಳುತ್ತೇನೆ ಎಂದು ಹೇಳಿದ. ಆ ಕಾಲಕ್ಕೆ ನನ್ನ ಅತ್ತೆಯ ತಮ್ಮ ಚನ್ನವೀರಣ್ಣರಾಧ್ಯ ಇವರು ಸ್ವತಃ ಮುಂಗಡ ಹಣ ನೀಡಿ ನಾಡನಹಳ್ಳಿಯ ಕೆ.ಎಸ್.ಆರ್.ಟಿ.ಸಿ ಬಡಾವಣೆಯಲ್ಲಿ ಬಾಡಿಗೆ ಮನೆ ಮಾಡಿ

ಆರೋಪಿಗೆ ಕೊಟ್ಟಿದ್ದರು. ಆಗ ಆರೋಪಿ ಸ್ವಂತ ಮನೆಯಲ್ಲಿ ಇರುವುದಿಲ್ಲ ಎಂದು ಹೇಳಿದ್ದಕ್ಕೆ ಬಾಡಿಗೆ ಮನೆ ಮಾಡಿಕೊಟ್ಟಿದ್ದರು. ನಾಡನಹಳ್ಳಿಯಲ್ಲಿ ವಾಸವಿದ್ದಾಗ ಪಲ್ಲವಿ ಟೈಲರಿಂಗ್ ಕೆಲಸ ಮಾಡುತ್ತಿದ್ದರು. ಆರೋಪಿ ವರುಣದಲ್ಲಿ ವಾಸವಿದ್ದಾಗ ಒಂದು ದಿನ ನನ್ನ ಹೆಂಡತಿ ಹೇಳಿದ್ದರಿಂದ ನಾನು ಆರೋಪಿಯ ಹೆಂಡತಿ ಪಲ್ಲವಿಯನ್ನು ಚಾಮುಂಡಿ ಬೆಟ್ಟದ ಬಳಿಯಿಂದ ನನ್ನ ಬೈಕಿನಲ್ಲಿ ಕೂರಿಸಿಕೊಂಡು ಬಂದಿದ್ದರಿಂದ ಆಗ ಆರೋಪಿ ನನ್ನ ಮೇಲೆ ಅನುಮಾನ ಕಲ್ಪಿಸಿಕೊಂಡು ನಿಮ್ಮಿಬ್ಬರಿಗೂ ಸಂಬಂಧ ಇದೆ ಎಂದು ಹೇಳಿದ. ಪಲ್ಲವಿ ಯಾರೊಂದಿಗೂ ಮಾತನಾಡಿದರೂ ಸಹ ಅವರೊಂದಿಗೆ ಸಂಬಂಧ ಇದೆ ಎಂದು ಅನುಮಾನಪಡುತ್ತಿದ್ದ. ಸಾಲ ಮಾಡಿಕೊಂಡಿದ್ದರಿಂದ ಹಣ ತೆಗೆದುಕೊಂಡು ಬಾ ಎಂದು ಪಲ್ಲವಿಗೆ ತೊಂದರೆ ನೀಡುತ್ತಿದ್ದ.

ದಿನಾಂಕ 14.6.2023 ರಂದು ಬೆಳಿಗ್ಗೆ ನಾನು ತೋಟದಲ್ಲಿ ಕೆಲಸ ಮಾಡುವಾಗ ಚನ್ನವೀರಣ್ಣರಾಧ್ಯ ಇವರ ಮಗಳು ನನಗೆ ಫೋನ್ ಮಾಡಿ ಲೋಕೇಶ ಆರಾಧ್ಯ ಬೆಳಿಗ್ಗೆ 4 ಗಂಟೆಗೆ ಪಲ್ಲವಿಯನ್ನು ಕೊಲೆ ಮಾಡಿದ್ದೇನೆ ಎಂದು ತನ್ನ ತಂದೆಗೆ ತಿಳಿಸಿದ್ದಾಗಿ ಹೇಳಿದ್ದಳು. ಆಗ ನಾನು ನನ್ನ ಅತ್ತೆ ವಾಸವಿದ್ದ ಮೇಲಿನ ಮನೆಯಲ್ಲಿ ನನ್ನ ಹೆಂಡತಿ ಜೊತೆ ವಾಸವಿದ್ದೆ. ಆ ದಿನ ನನಗೆ ವಿಷಯ ಗೊತ್ತಾದ ಬಳಿಕ ನಾನು ನನ್ನ ಅತ್ತೆಯನ್ನು ಕರೆದುಕೊಂಡು ಆರೋಪಿಯ ಮನೆ ಬಳಿ ಹೋದೆ. ನಂತರ ನನ್ನ ಮಾವ ಮತ್ತು ಇತರರು ಅಲ್ಲಿಗೆ ಬಂದರು. ಆ ದಿನ ಬೆಳಿಗ್ಗೆ ಅಂದಾಜು 7.30 ಕ್ಕೆ ನಾವು

ಆ ಮನೆ ಬಳಿ ಹೋದೆವು. ನಾವು ಹೋದಾಗ ಆ ಮನೆಯ ಬೀಗ ಹಾಕಿತ್ತು. ನಾವು ಮನೆ ಮಾಲೀಕರ ಬಳಿ ಬೀಗ ಪಡೆದುಕೊಂಡು ಬಾಗಿಲು ತೆಗೆದು ಒಳಗೆ ಹೋದೆವು. ಆಗ ಪಲ್ಲವಿಯ ದೇಹ ಹಾಲ್‌ನಲ್ಲಿ ಹಾಸಿಗೆ ಮೇಲಿತ್ತು. ಅವಳ ಕುತ್ತಿಗೆಗೆ ಗಾಯವಾಗಿತ್ತು, ಮುಖದ ಮೇಲೆ ಪರಚಿದ ಗಾಯವಾಗಿತ್ತು. ಬಾಯಿಗೆ ಬಟ್ಟೆ ತುರುಕಲಾಗಿತ್ತು. ನಾವು ಅಲ್ಲಿಗೆ ಹೋದಾಗ ಆರೋಪಿ ಮಗುವನ್ನು ಬಿಟ್ಟು ಅಲ್ಲಿಂದ ಓಡಿ ಹೋದನು. ಆಗ ವೈಭವನನ್ನು ವಿಚಾರಿಸಿದಾಗ ರಾತ್ರಿ ಗಲಾಟೆಯಾಗಿತ್ತು, ನನ್ನ ತಂದೆ ನನ್ನ ತಾಯಿಯನ್ನು ಹೊಡೆದಿದ್ದಾನೆ ಮತ್ತು ದಿಂಬು ಹಾಕಿ ಅಮುಕಿದ್ದಾನೆ ನಂತರ ತಿಂಡಿ ಕೊಡಿಸುವುದಾಗಿ ಕರೆದುಕೊಂಡು ಹೋದ ಎಂದು ತಿಳಿಸಿದನು. ಆಗ ನನ್ನ ಮಾವ ಪೋಲಿಸರಿಗೆ ದೂರು ನೀಡಿರುತ್ತಾರೆ. ದಿನಾಂಕ 18.7.2023 ರಂದು ನನ್ನನ್ನು ವಿಚಾರಣೆ ಮಾಡಿ ನನ್ನ ಹೇಳಿಕೆ ಪಡೆದಿರುತ್ತಾರೆ.

ಪಾಟೀ ಸವಾಲುಃ ಆರೋಪಿ ಪರ ವಕೀಲರು ಚಾಸ 1, 7, 12 ರಿಂದ 15 ನ್ನು ಒಂದೇ ಬಾರಿಗೆ ಪಾಟೀ ಸವಾಲು ಮಾಡುವುದಾಗಿ ಅರ್ಜಿ ಸಲ್ಲಿಸಿದ್ದರಿಂದ ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ.,

2 ನೇ ಅಪರ ಜಿಲ್ಲಾ ಮತ್ತು ಸತ್ತ ನ್ಯಾಯಾಧೀಶರು
ಮೈಸೂರು